ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 122/2024**

ಪ್ರ.ವ.ಬೋ.ತಾಃ 24-06-2026

ಚಾಸಾಃ 9 ಫ್ರಾಸಾಃ 6

| | |
|---|---|
| ಸಾಕ್ಷಿಯ ಹೆಸರು | ಮಧು.ಟಿ. |
| ತಂದೆ/ಗಂಡನ ಹೆಸರು | ತಿಮ್ಮಾರೆಡ್ಡಿ |
| ವಯಸ್ಸು | 35 ವರ್ಷ |
| ವೃತ್ತಿ | ಖಾಸಗಿ ಕೆಲಸ |
| ವಾಸ | ಎಸ್.ಅಪ್ಪೇನಹಳ್ಳಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನಾನು ಕೆಎ-03-ಜೆಟಿ-4102 ಟಿವಿಎಸ್ ಜುಪಿಟರ್ ವಾಹನದ ಮಾಲೀಕನಾಗಿರುತ್ತೇನೆ. ಸದರಿ ವಾಹನವನ್ನು ನನ್ನ ತಂದೆ ಮೃತ ತಿಮ್ಮಾರೆಡ್ಡಿಯವರು ಓಡಿಸುತ್ತಿದ್ದರು. ಆ ದ್ವಿಚಕ್ರ ವಾಹನದ ಬೇಡತ್ತೂರು ಬಳಿ ಅಪಘಾತವಾಗಿದ್ದು, ಆ ವಾಹನಕ್ಕೆ ಬುಲೋರೋ ವಾಹನ ಡಿಕ್ಕಿಪಡಿಸಿತು. ಇದರಿಂದ ನನ್ನ ತಂದೆಗೆ ಬಲಗೈ, ಬಲಗಾಲು ಮತ್ತು ತಲೆಗೆ ಪೆಟ್ಟಾಗಿ ಮೃತಪಟ್ಟರು. ಹಿಂಬದಿ ಸವಾರ ಗೋಪಾಲಯ್ಯನವರು ಚಿಕಿತ್ಸೆ ಪಡೆಯುತ್ತಿರುವಾಗ ಚಿಕಿತ್ಸೆ ಫಲಕಾರಿಯಾಗದೇ ಅವರೂ ಸಹ ಮೃತಪಟ್ಟರು. ಆ ದ್ವಿಚಕ್ರ ವಾಹನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸುವಂತೆ ಪೊಲೀಸರು ಮೋಟಾರು ವಾಹನ ಕಾಯಿದೆ ಕಲಂ 133 ರ ಅಡಿಯಲ್ಲಿ ನನಗೆ ನೋಟೀಸ್ ನೀಡಿದ್ದು, ಆ ನೋಟೀಸಿಗೆ ನಾನು ಮರುಉತ್ತರ ನೀಡಿರುತ್ತೇನೆ. ಆ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.8

ಎಂದು, ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಆ ಮರು ಉತ್ತರದ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಆ ದ್ವಿಚಕ್ರ ವಾಹನವನ್ನು ಸೂಕ್ತ ಇಂಡೆಮ್ನಿಟಿ ಬಾಂಡ್ ನೀಡಿ ನನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ. ಆ ಇಂಡೆಮ್ನಿಟಿ ಬಾಂಡ್ ನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.10 ಎಂದು, ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ– ಆರೋಪಿತರ ಪರವಾಗಿ ಶ್ರೀ.ಆರ್.ಆರ್. ವಕೀಲರಿಂದಃ–**

ಅಪಘಾತವಾದ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿದ್ದೆನು. ನಮ್ಮ ಮನೆಯಿಂದ ಅಪಘಾತವಾದ ಸ್ಥಳ ಸುಮಾರು ಎರಡೂವರೆ ಕಿ.ಮೀ. ದೂರದಲ್ಲಿದೆ. ನಾನು ಅಪಘಾತವಾದ ಸ್ಥಳಕ್ಕೆ ಬಂದಾಗ ಬೆಳಗ್ಗೆ 10.30 ಗಂಟೆ ಆಗಿತ್ತು. ಅಪಘಾತಪಡಿಸಿದ ಅಶೋಕ ಲೇಲ್ಯಾಂಡ್ ವಾಹನ ಪಲ್ಟಿಯಾಗಿ ಸ್ಥಳದಲ್ಲಿಯೇ ಬಿದ್ದಿತ್ತು. ಆ ರಸ್ತೆಯ ಎಡಭಾಗದಲ್ಲಿ ಅಶೋಕ ಲೇಲ್ಯಾಂಡ್ ವಾಹನ ಬಿದ್ದಿತ್ತು. ನನ್ನ ತಂದೆ ಓಡಿಸುತ್ತಿದ್ದ ದ್ವಿಚಕ್ರ ವಾಹನ ರಸ್ತೆಯ ಬಲ ಭಾಗದಲ್ಲಿ ಬಿದ್ದಿತ್ತು ಆ ಅಶೋಕ ಲೇಲ್ಯಾಂಡ್ ಮತ್ತು ನನ್ನ ತಂದೆ ಓಡಿಸುತ್ತಿದ್ದ ದ್ವಿಚಕ್ರ ವಾಹನಗಳು ಬಿದ್ದಿದ್ದ ದೂರ ಸುಮಾರು 25 ಮೀಟರ್ ಆಗುತ್ತಿತ್ತು.

ಮರು ವಿಚಾರಣೆಃ– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ